# ಉಡುಪಿನಲ್ಲೂ ಕಾಮನಬಿಲ್ಲು

■ ಆಶಾ ಎಸ್. ಕುಲಕರ್ಣಿ



ಮಹಿಳೆಯರ ಫ್ಯಾಷನ್ ಉಡುಪು ನಿತ್ಯ ನೂತನ. ಇಂದಿನ ಫ್ಯಾಷನ್ ನಾಳೆಯೇ ಔಟ್‌ಡೇಟೆಡ್ ಆಗಲೂಬಹುದು. ಹಾಗೇ ಹಳೆ ಕಾಲದ ಫ್ಯಾಷನ್ ಮತ್ತೆ ಮರುಕಳಿಸಿ ಹೊಸ ವಿನ್ಯಾಸ, ಹೊಸ ರೂಪ ಪಡೆದು ಟ್ರೆಂಡ್ ಸೃಷ್ಟಿ ಮಾಡಲೂಬಹುದು. ಇದರಲ್ಲಿ ಇದೀಗ ನವೀನ ಸೇರ್ಪಡೆ ಎಂದರೆ ರೇನ್‌ಬೊ ಅಥವಾ ಕಾಮನಬಿಲ್ಲು ಉಡುಪು.

ಹಿಂದೆಲ್ಲಾ ಲಂಬಾಣಿ ಜನಾಂಗದ ಮಹಿಳೆಯರ ಸಾಂಪ್ರದಾಯಿಕ ಉಡುಪುಗಳಲ್ಲಿ ಉದ್ದ ಲಂಗಕ್ಕೆ ಆದ್ಯತೆ ಇತ್ತು. ವಿವಿಧ ವಿನ್ಯಾಸದ ಎಂಬ್ರಾಯಡರಿ ವರ್ಕ್, ಪ್ಯಾಚ್ ವರ್ಕ್, ಮಿರರ್ ವರ್ಕ್ ಮಾಡಿಕೊಂಡು ಉಡುಪುಗಳನ್ನು ಅತ್ಯಂತ ಸುಂದರವಾಗಿ ತಯಾರಿಸಿ ಧರಿಸುತ್ತಿದ್ದರು.

ಅದುವೇ ಫ್ಯಾಷನ್ ಅಪ್‌ಡೇಟ್ ಆಗಿ ಈಗ ಲಾಂಗ್ ಸ್ಕರ್ಟ್ ರೂಪ ಪಡೆದುಕೊಂಡಿದೆ. ಮೊದ ಮೊದಲು ಪ್ಲೇನ್ ಸಿಂಗಲ್ ಕಲರ್‌ನಲ್ಲಿ ದೊರಕುತ್ತಿದ್ದ ಲಾಂಗ್ ಸ್ಕರ್ಟ್‌ಗಳು ಇದೀಗ ಮಲ್ಟಿಕಲರ್, ಪ್ಯಾಚ್ ವರ್ಕ್, ಮಿರರ್ ವರ್ಕ್, ಫ್ಲೋರಲ್... ಹೀಗೆ ನಾನಾ ವಿನ್ಯಾಸಗಳಲ್ಲಿ, ಕಾಮನಬಿಲ್ಲಿನ ಬಣ್ಣಗಳಲ್ಲಿ ಮಾರುಕಟ್ಟೆಗೆ ಎಂಟ್ರಿ ಕೊಟ್ಟಿವೆ. ಇದು ಕಾಲೇಜು ಕನ್ಯೆಯರನ್ನು ಮಾತ್ರವಲ್ಲ, ಆಫೀಸ್‌ಗೆ ಹೋಗುವ ಮಹಿಳೆಯರನ್ನೂ ಸೂಜಿಗಲ್ಲಿನಂತೆ ಸೆಳೆಯುತ್ತಿದೆ. ಈ ತರಹದ ಲಾಂಗ್ ಸ್ಕರ್ಟ್‌ಗಳನ್ನು ಆಧುನಿಕ, ಸಾಂಪ್ರದಾಯಿಕ ಎರಡೂ ಮನೋಭಾವದವರು ಧರಿಸಬಹುದು. ಲಾಂಗ್ ಸ್ಕರ್ಟ್‌ಗಳಲ್ಲಿ ದೊಡ್ಡದಾದ ಬಾರ್ಡರ್ ವಿನ್ಯಾಸವಿದ್ದರೆ ಅದನ್ನು ಯಾವುದೇ ಸಭೆ ಸಮಾರಂಭ, ಶುಭ ಕಾರ್ಯಗಳಿಗೆ ಧರಿಸಬಹುದು. ಹಾಗೇ ಬಾರ್ಡರ್ ಇಲ್ಲದ ಲಾಂಗ್ ಸ್ಕರ್ಟ್‌ಗಳು ಪಾರ್ಟಿಗಳಿಗೆ, ಕಾಲೇಜ್ ಡೇ, ಎಥ್ನಿಕ್ ಡೇ ಮುಂತಾದ ಸಂದರ್ಭಗಳಲ್ಲಿ ಧರಿಸಬಹುದು.

ಇದೀಗ ರೇನ್‌ಬೊ ಲಾಂಗ್ ಸ್ಕರ್ಟ್‌ಗಳಲ್ಲಿ ವೆಸ್ಟರ್ನ್ ಟಚ್‌ಗಳಿರುವ ಅಂಬ್ರೆಲ್ಲಾ ಸ್ಕರ್ಟ್‌ಗಳು ಯುವತಿಯರನ್ನು ಹೆಚ್ಚು ಆಕರ್ಷಿಸುತ್ತಿವೆ. ಸಾಕಷ್ಟು ಅಗಲವಾಗಿ ಕಾಣುವ ಈ ಅಂಬ್ರೆಲ್ಲಾ ಸ್ಕರ್ಟ್‌ಗಳನ್ನು 3 ಪೀಸ್, 6 ಪೀಸ್, 9 ಪೀಸ್, 12 ಪೀಸ್‌ಗಳಲ್ಲಿ ತಯಾರಿಸಲಾಗುತ್ತಿದ್ದು, ಈ ತರಹದ ಪೀಸ್‌ಗಳನ್ನು ಒಂದಕ್ಕೊಂದು ಜೋಡಣೆ ಮಾಡುವುದರಿಂದ ಅಂಬ್ರೆಲ್ಲಾ ವಿನ್ಯಾಸ ಇನ್ನಷ್ಟು ಅಗಲವಾಗಿ ಸುಂದರವಾಗಿ ಕಾಣುತ್ತದೆ.

ಅಲ್ಲದೆ ಈ ವಿನ್ಯಾಸದ ಸ್ಕರ್ಟ್‌ಗಳನ್ನು ಸಿಂಗಲ್ ಲೇಯರ್, ಡಬಲ್ ಲೇಯರ್ ಹಾಗೇ ಒಂದರ ಕೆಳಗೊಂದು ಹತ್ತು ಲೇಯರ್‌ಗಳಲ್ಲಿಯೂ ತಯಾರಿಸಲಾಗುತ್ತಿದೆ. ಈ ತರಹದ ಲಾಂಗ್ ಸ್ಕರ್ಟ್‌ಗಳಿಗೆ ಬಾರ್ಬಿಡಾಲ್ ಲುಕ್ ನೀಡುತ್ತದೆ. ಈ ಲಾಂಗ್ ಸ್ಕರ್ಟ್‌ಗಳ ಜೊತೆ ಮಿಕ್ಸ್ ಮ್ಯಾಚ್ ವಿನ್ಯಾಸ ಕೂಡ ಇದೀಗ ಟ್ರೆಂಡಿಂಗ್‌ನಲ್ಲಿದೆ. ಇವುಗಳ ಜೊತೆ ಕ್ರಾಪ್ ಟಾಪ್, ಜಾಕೆಟ್ ಬ್ಲೌಸ್, ಬ್ಯಾಕ್ ಬಟನ್ ಬ್ಲೌಸ್, ಹೂವಿನ ಪ್ರಿಂಟ್ ಇರುವ ಶಾರ್ಟ್ ಬ್ಲೌಸ್, ಶಾರ್ಟ್ ಕುರ್ತಾ, ರಾಜಸ್ತಾನಿ ಕುರ್ತಾಗಳ ಆಯ್ಕೆಗಳೂ ಇವೆ.

ಮಲ್ಟಿ ಕಲರ್ ಬ್ಲೌಸ್ ಇಲ್ಲವೇ ಟಾಪ್ ಧರಿಸಬಹುದಾಗಿದೆ. ಕಾಮನಬಿಲ್ಲು ಲಾಂಗ್ ಸ್ಕರ್ಟ್‌ನಲ್ಲಿ ಹಲವು ಬಣ್ಣಗಳಿರುವುದರಿಂದ ಬ್ಲೌಸ್ ಯಾವ ವರ್ಣದ್ದಾದರೂ ಧರಿಸಬಹುದು. ಈ ವಿನ್ಯಾಸ ಯುವತಿಯರನ್ನು ಮಾತ್ರವಲ್ಲ ಪುಟ್ಟ ಪುಟ್ಟ ಹೆಣ್ಣು ಮಕ್ಕಳನ್ನೂ ಕೂಡ ಆಕರ್ಷಿಸುತ್ತಿದೆ.

ಕಾಮನಬಿಲ್ಲು ವಿನ್ಯಾಸದಲ್ಲಿ ಪುಟ್ಟ ಪುಟ್ಟ ಫ್ರಾಕ್‌ಗಳು, ಸ್ಕರ್ಟ್‌ಗಳು ಅಲ್ಲದೆ ತರಹೇವಾರಿ ಉಡುಪುಗಳು ಮಕ್ಕಳನ್ನು ಸೆಳೆಯುತ್ತಿವೆ. ಈ ತರಹದ ಸ್ಕರ್ಟ್ ಧರಿಸಿದಾಗ ಇದರ ಜೊತೆ ಪ್ಲೇನ್ ವೈಟ್ ಅಥವಾ ಬ್ಲಾಕ್ ಕ್ರಾಪ್ ಟಾಪ್ ಧರಿಸಿ ಮತ್ತು ಇದೇ ವಿನ್ಯಾಸದ ಕಿವಿಯೋಲೆ ಧರಿಸುವುದೇ ಇಂದಿನ ಟ್ರೆಂಡ್.

## ಲಾಂಗ್ ಸ್ಕರ್ಟ್ ಬಳಸುವವರಿಗೆ ಟಿಪ್ಸ್

- ಉದ್ದ ಇರುವ ಯುವತಿಯರು ಯಾವುದೇ ತರಹದ ಲಾಂಗ್ ಸ್ಕರ್ಟ್ ಧರಿಸಿದರೂ ಚೆನ್ನಾಗಿ ಕಾಣುತ್ತಾರೆ. ಅದರಲ್ಲೂ ಅಂಬ್ರೆಲ್ಲಾ ಕಟ್ ಇವರಿಗೆ ಚೆನ್ನಾಗಿ ಒಪ್ಪುತ್ತದೆ.
- ದಪ್ಪಗಿರುವ ಯುವತಿಯರು ಅಂಬ್ರೆಲ್ಲಾ ಕಟ್ ಲಾಂಗ್ ಸ್ಕರ್ಟ್ ಬದಲಾಗಿ ಸಿಂಪಲ್ಲಾಗಿರುವ ನಾರ್ಮಲ್ ಉದ್ದ ಗೆರೆಯ ಲಾಂಗ್ ಸ್ಕರ್ಟ್ ಧರಿಸುವುದು ಒಳ್ಳೆಯದು. ಇದರಿಂದ ಅವರು ತೆಳ್ಳಗೆ ಉದ್ದಗೆ ಕಾಣುತ್ತಾರೆ.
- ಕುಳ್ಳಗಿರುವವರು ಉದ್ದ ಗೆರೆಯ ಲಾಂಗ್ ಸ್ಕರ್ಟ್ ಜೊತೆಗೆ ಹೈಹೀಲ್ಸ್ ಚಪ್ಪಲಿ ಧರಿಸುವುದು ಒಳ್ಳೆಯದು. ಇದರಿಂದ ಅವರು ಸಾಕಷ್ಟು ಎತ್ತರವಾಗಿ ಕಾಣಿಸುತ್ತಾರೆ.
- ದಪ್ಪಗಿರುವವರು ಆದಷ್ಟು ಅಡ್ಡಗೆರೆಯ ಲಾಂಗ್ ಸ್ಕರ್ಟ್‌ಗಳನ್ನು ಧರಿಸಬೇಡಿ. ಈ ತರಹದ ಬಟ್ಟೆಗಳನ್ನು ಧರಿಸುವುದರಿಂದ ಅವರು ಇನ್ನೂ ದಪ್ಪಗೆ ಕಾಣುತ್ತಾರೆ. ■